ಶ್ರೀ ಎಚ್. ಸಿದ್ದವೀರಪ್ಪ.—ಅವರು ಕೇಳಿರತಕ್ಕಂಥ ಕೋರಿಕೆಯ ಮೇಲೇ ಕೊಟ್ಟಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗಾದರೆ ಅದೇನು ಬಾಯಿಮಾತಿನ ಕೋರಿಕೆಯೋ ?

ಶ್ರೀ ಎಚ್. ಸಿದ್ದವೀರಪ್ಪ.— ನಾನು definite ಆಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆ ಸಮಿತಿಯವರು ಯಾವಾಗ ತೀರ್ಮಾನಮಾಡಿದರು ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರಗಳು ನನ್ನಲ್ಲಿ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಹೋಗಲಿ. ಆದಿನ ಎಷ್ಟು ಜನರು ಅರ್ಜಿಹಾಕಿಕೊಂಡಿದ್ದರು, ಆ ಸಮಿತಿಯವರ ಮುಂದೆ ಎಷ್ಟು ಅರ್ಜಿಗಳಿದ್ದವು ಎನ್ನುವುದನ್ನಾದರೂ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅರ್ಜಿಗಳು ಬಂದಿದ್ದವೇ, ಇಲ್ಲವೇ ಎನ್ನುವುದನ್ನು ತಿಳಿಸುವುದಕ್ಕೇ ನೋಟೀಸ್ ಬೇಕೆಂದು ತಿಳಿಸಿದ್ದು.

ಶ್ರೀ ಕೆ. ಪುಟ್ಟಸ್ವಾಮಿ.—ಅಂಥ ಅನುಮಾನವಿದ್ದರೂ "information is not readily available" ಎಂದು ತಾವು ಹೇಗೆ ತಿಳಿಸಿದಿರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅರ್ಜಿಗಳಿದ್ದವೇ, ಇಲ್ಲವೇ ಎಂಬುದನ್ನು ಪರಿಶೀಲನೆಮಾಡುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಮಾಚಾರ Assistant Director of Agriculture Office ನಲ್ಲಿ ತಾನೇ ದೊರೆಯುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಕೆ. ಪುಟ್ಟಸ್ವಾಮಿ.—ಇದು ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟಿದ್ದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಸ್ಥಳವಿರುವುದೇನೋ ಬೆಂಗಳೂರು ಜಿಲ್ಲೆಯಲ್ಲೇ. ಈ ಜಿಲ್ಲೆಗೆ ಸಂಬಂಧಪಟ್ಟದ್ದಾಗಿಯೇ ಇರಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಅಂದಮೇಲೆ ಇಡೀ ಸರ್ಕಾರ, ಆಠಾರ ಕಛೇರಿ ಮತ್ತು ಎಲ್ಲಾ ಇಲಾಖೆಗಳ ಮೊಖ್ತೇಸರರೂ ಇರ್ಲೇ 24 ಘಂಟೆಗಳ ಕ್ರಾಲ್ ಇದ್ದಾಗ್ಗೂ information ದೊರೆಯುಲಿಲ್ಲವೆಂದು ಹೇಳಿರತಕ್ಕ ಸಮಾಚಾರ ಏನು ?

ಶ್ರೀ ಎಚ್. ಸಿದ್ದವೀರಪ್ಪ.—ಹುಡುಕಿಸುತ್ತಿದ್ದೇವೆ. ಆಗಲೇ ತಿಳಿಸಿದಹಾಗೆ 1st June 1952ರಲ್ಲಿ ಕೆಲಸ ಪ್ರಾರಂಭವಾಗಿದ್ದು. Probably a little earlier than that, application ಬಂದಿರಬೇಕು.

Mr. SPEAKER.—Question Nos. 212 and 213 may be taken up together.

Sri H. SIDDAVEERAPPA.—I beg to submit that I am not ready with full information. These two questions may be taken up on Monday.

Mr. SPEAKER --Yes, these questions will be taken up on Monday. Question No. 304.

Panakattus in different communities in Bangalore Corporation Area.

Q.—304. Sri B. M. SEENAPPA (Cubbonpet).—

Will the Government be pleased to state :—

(*a*) whether they are aware of several "Panakattus" (ಪಣಕಟ್ಟುಗಳು) in different communities in Bangalore Corporation Area ;

(*b*) whether there are any Government rules or conditions imposed on these 'panakattus,' to go out of their boundary limits or beyond the streets where they are living to other streets during devotional processions of gods or marriages or 'huli vesha' or Kamana Habbada veshagalu' etc. ;

(*c*) whether there is any Government Order directing that permission of the Deputy Commissioner or the District Magistrate should be obtained for such genuine processions on these occasions ;

(*d*) whether it is true that when permission for such purposes is applied for to the District Magistrate or other authority, that order is passed as follows :—"The procession may proceed where there is no objection ;

(*e*) whether it is not true that such order of the District Magistrate with the above remarks is encouraging some rowdy panakattus in different localities to offer intentional hindrances or obstructions to the peaceful processions ;

(*f*) whether it has come to their notice that the Police are objecting to allow peaceful processions from street to street in the guise of the words in the order of the District Magistrate ; and whether this action of the Police is regular ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) There are no Government rules or conditions in this behalf.

(*c*) There is no Government Order.

(*d*) As per the conditions of the licence imposed by the District Magistrate, processions are being conducted.

(*e*) No.

(*f*) The District Magistrate passes suitable orders according to the exigencies of the situation. These orders are only given effect to by the Police.

ಶ್ರೀ ಬಿ. ಎಂ. ಶೀನಪ್ಪ.—ತಾವು ಇಲ್ಲಿ (ಬಿ) ಮತ್ತು (ಸಿ) ಭಾಗಗಳಿಗೆ ಒದಗಿಸಿರುವ ಉತ್ತರಕ್ಕೂ (ಡಿ) ಭಾಗದ ಪ್ರಶ್ನೆಗೆ ಒದಗಿಸಿರತಕ್ಕ ಉತ್ತರಕ್ಕೂ ಒಂದಕ್ಕೊಂದು ವಿರುದ್ಧವಾಗಿರುವುದಿಲ್ಲವೇ ?

*ಶ್ರೀ ಎಚ್. ಸಿದ್ದವೀರಪ್ಪ.—ಇದು constitutional ವಿಚಾರ. ತಾವು ಯಾವ ರೀತಿ ಅನುಸರಿಸುತ್ತೀರಿ ಅನ್ನುವುದು ಗೊತ್ತಿಲ್ಲ.

ಶ್ರೀ ಬಿ. ಎಂ. ಶೀನಪ್ಪ.—ತಾವು ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ನಾನಾ ಪಣಕಟ್ಟುಗಳಿಗೆ ಸೇರಿದ ಕೋಮುಗಳವರು ಇರುತ್ತಾರೆಂಬುದನ್ನು ಒಪ್ಪಿಕೊಂಡಿದ್ದೀರಿ. (ಡಿ) ಭಾಗದಲ್ಲಿ ಕೇಳಿರತಕ್ಕ ಪ್ರಶ್ನೆಯನ್ನೂ ತಾವು ಒಪ್ಪಿಕೊಂಡಿದ್ದೀರಿ. ಹಾಗಿದ್ದರೂ ಸರ್ಕಾರದವರು (ಬಿ) ಮತ್ತು (ಸಿ) ಭಾಗದ ಪ್ರಶ್ನೆಗಳಿಗೆ ಬರವಣಿಗೆಯಲ್ಲಿ ಯಾವುದನ್ನೂ ಕೊಟ್ಟಿಲ್ಲವೆಂದು ಹೇಳುವುದು.....

ಅಧ್ಯಕ್ಷರು.—ತಾವು ಪ್ರಶ್ನೋತ್ತರದಲ್ಲಿರುವುದನ್ನೇ ಓದುತ್ತಿದ್ದೀರಿ. ತಮಗೆ ಬೇಕಾದ ಉತ್ತರ (f) ಭಾಗದಲ್ಲಿದೆ, ಇನ್ನೇನಾದರೂ ಪ್ರಶ್ನೆಗಳಿದ್ದರೆ ಕೇಳಿ.

ಶ್ರೀ ಬಿ. ಎಂ. ಶೀನಪ್ಪ.—ಭಾರತ ರಾಜ್ಯಾಂಗದಲ್ಲಿ ಸೂಚಿಸಿರುವಂತೆ ಸರ್ವ ಪ್ರಜೆಗಳಿಗೂ ದತ್ತವಾದಂಥಾದ್ದನ್ನು ಅನುಭವಿಸತಕ್ಕ ಹಕ್ಕು ಎಲ್ಲರಿಗೂ ಇದೆಯಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನಿನ ಚೌಕಟ್ಟಿನಲ್ಲದ್ದುಕೊಂಡು ಅನುಭವಿಸಲು ಎಲ್ಲರಿಗೂ ಹಕ್ಕಿದೆ.

ಶ್ರೀ ಬಿ. ಎಂ. ಶೀನಪ್ಪ.—ಹಬ್ಬ, ಮದುವೆ ಮತ್ತು ದೇವರ ಉತ್ಸವ ಇಂಥ ಸಂಬಂಧದಲ್ಲಿ ಮೆರವಣಿಗೆಗಳು ಹೋಗಬೇಕಾಗಿದ್ದರೆ, ಆಗಲೂ ಕೂಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿಹಾಕಿಕೊಳ್ಳಬೇಕೆ?

ಶ್ರೀ ಎಚ್. ಸಿದ್ದವೀರಪ್ಪ.—ಲಾ ಅಂಡ್ ಆರ್ಡರು ಗಳಿಗೆ ಬಾಧಕವಾಗದಿರುವಂತೆ ನೋಡಿಕ್ಕೊಳ್ಳುವುದಕ್ಕಾಗಿ, ಲೈಸನನ್ನು ತೆಗೆದುಕೊಳ್ಳಬೇಕೆಂದು ಹೇಳಲಾಗಿದೆ. ಇತ್ತೀಚೆಗೆ ಈ ಸಂಬಂಧದಲ್ಲೇ ಹೈಕೋರ್ಟಿನವರೆಗೂ ಒಂದು ಕೇಸುನಡೆದು ಅಲ್ಲಿ ತೀರ್ಮಾನವಾಗಿರುತ್ತದೆ, ತಮಗೂ ಈ ವಿಚಾರ ಗೊತ್ತಿದೆ. ಯಾವ ರೀತಿಯಿಂದಲೇ ಆಗಲಿ ಯಾರಿಗೂ ಒಂದು ತೊಂದರೆಯಾಗದಿರುವಂತೆ ನೋಡಿಕೊಳ್ಳುವುದಕ್ಕಾಗಿ ಆ ರೀತಿ ಮಾಡಲಾಗಿದೆ.

ಶ್ರೀ ಬಿ. ಎಂ. ಶೀನಪ್ಪ.—ಈಗ ಬೇರೆಯವರು ಅಡ್ಡಿಪಡಿಸುತ್ತಿರುವುದರಿಂದ ತೊಂದರೆಯಾಗುತ್ತಿದೆ. ಇದನ್ನು ತಪ್ಪಿಸಿ ಎಲ್ಲಿ ಬೇಕೋ ಅಲ್ಲಿಗೆ ಹೋಗುವುದಕ್ಕೆ ಅನುಕೂಲಪಡಿಸಿಕೊಡುತ್ತೀರಾ?

Sri H. SIDDAVEERAPPA.—I will examine whether it is possible to issue any licence to enable people to have freedom of worship or procession without attaching conditions.

ಶ್ರೀ ಬಿ. ಎಂ. ಶೀನಪ್ಪ.—ಮುಂದೆ ಆರೀತಿಯಾಗದಂತೆ ನೋಡಿಕೊಳ್ಳುತ್ತೀರಾ?

Sri H. SIDDAVEERAPPA.—I will direct the Deputy Commissioner to look into that almost immediately.

Satta Gambling in Bangalore City and District Headquarters

Q.—253. Sri R. ANANTARAMAN (Chamarajpet).—

Will the Government be pleased to state :—

(*a*) whether they are aware of gambling under cotton market rates (*Satta*) in Bangalore City and other District Headquarters ;

(*b*) the number of cases registered from April 1952 to 1953 ;

(*c*) the number of cases in which the accused were convicted (districtwar statement to be given) ;

(*d*) whether they have taken any steps to bring a bill to prevent such offences ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) and (*c*) Statement appended below.

(*d*) The question is under consideration.

[*Vide* REPLY TO CLAUSES (*b*) AND (*c*)]

Statement showing the number of cases put up under gambling.

Serial No.	District	No. of cases put up from April 1952 to June 1953.	No. of cases in which accused were convicted
1	Bangalore District.	...	...
2	Do North ...	166	120
3	Do South ...	133	113
4	Mysore District ...	9	8
5	Mandya do ...	...	...
6	Hassan do ...	...	...
7	Shimoga do ...	2	1
8	Chikmagalur do ...	...	...
9	Chitaldrug do ...	...	...
10	Tumkur do ...	...	...
11	Kolar do ...	...	...
12	Kolar Gold Fields...	...	...

Sri R. ANANTARAMAN.—From the Statement it is seen that no cases are indicated against Bangalore City. Is it because that no offences are committed in Bangalore City or the Police are not willing to register the cases?

Mr. SPEAKER.—Please see Sl. No. 2.—166. It is the highest number.

*Sri H. SIDDAVEERAPPA.—You have asked for district figures.